ನಿಶ್ಚಿಂತೆಯಿಂದ ಮಲಗಿದ್ದ. ಇದ್ದಕ್ಕಿದ್ದಂತೆ ಅಲ್ಲಾಡಿದ. ನಾನು ಹೆದರಿಕೊಂಡಿರಬೇಕು ಎಂದು ನಿಮಗೆ ಎನಿಸಿರಬೇಕು. ಆದರೆ ಇಲ್ಲ. ಆ ಕೋಣೆಯಲ್ಲಿ ಗಾಢವಾದ ಕತ್ತಲೆ ತುಂಬಿತ್ತು. ನಾನು ಬಾಗಿಲು ತೆರೆಯುವುದನ್ನು ಅವನು ನೋಡಲು ಸಾಧ್ಯವಿಲ್ಲ ಎಂದು ತಿಳಿದಿತ್ತು. ಬಾಗಿಲನ್ನು ಮೆಲ್ಲನೆ, ನಿಧಾನಕ್ಕೆ ನೂಕತೊಡಗಿದೆ. ಮೊದಲು ತಲೆ ತೂರಿಸಿದೆ, ನಂತರ ಕೈ, ಮರೆಮಾಡಿದ ದೀಪದ ಸಹಿತ. ಇದ್ದಕ್ಕಿದ್ದ ಹಾಗೆಯೇ ಮುದುಕ ಹಾಸಿಗೆಯಲ್ಲಿ ಕುಳಿತು 'ಯಾರಲ್ಲಿ?' ಎಂದು ಕೂಗಿದ.

ನಾನು ಅಲ್ಲಾಡದೆ ನಿಂತೆ. ಒಂದು ಇಡೀ ತಾಸು ನಾನು ಅಲುಗಲಿಲ್ಲ. ಅವನು ಹಾಸಿಗೆಯ ಮೇಲೆ ಮತ್ತೆ ಮಲಗಿದ ಶಬ್ದವೂ ಕೇಳಲಿಲ್ಲ. ಅವನು ಹಾಗೆಯೇ ಕೂತಿದ್ದ, ಸದ್ದಿಗಾಗಿ ಆಲಿಸುತ್ತಾ... ಮತ್ತೆ ಸಣ್ಣ ಶಬ್ದ, ಮಂದ ದನಿಯಲ್ಲಿ ಭಯ ತುಂಬಿದ ಅಳು ಅವನಿಂದ ಹೊರಬಂದಿತು. ಅವನು ಮಂಚದ ಮೇಲೆ ಹೆದರಿಕೆಯಿಂದ ಕುಳಿತಿರುವುದು ಈಗ ನನಗೆ ತಿಳಿಯಿತು. ನಾನು ಅಲ್ಲಿದ್ದೇನೆ ಎಂಬ ಅರಿವು ಅವನಿಗಾಗಿದೆ ಎಂದು ನನಗೆ ಗೊತ್ತಾಯಿತು. ಅವನು ನನ್ನನ್ನು ನೋಡಲಿಲ್ಲ. ಶಬ್ದವನ್ನೂ ಕೇಳಲಿಲ್ಲ. ಆದರೆ... ನಾನಲ್ಲಿ ನಿಂತಿದ್ದು ಅವನಿಗೆ ಸ್ಪಷ್ಟವಾಯಿತು. ಸಾವು ಅವನ ಮುಂದೆ ನಿಂತಿದೆ ಎಂದು ಅವನಿಗೆ ಅರಿವಾಯಿತು.

ದೀಪದ ಮೇಲಿನಿಂದ ನಾನು ಬಟ್ಟೆಯನ್ನು ಮೆಲ್ಲನೆ, ನಿಧಾನಕ್ಕೆ ಮೆಲ್ಲಗೆ ಸರಿಸಿದೆ. ಬೆಳಕಿನ ರೇಖೆ, ಬಟ್ಟೆಯ ನಡುವಿನಿಂದ ತಪ್ಪಿಸಿಕೊಂಡು ಅವನ ಮೇಲೆ, ಆ 'ರಣಹದ್ದಿನ ಕಣ್ಣಿನ' ಮೇಲೆ ಪ್ರಕಾಶಿಸಿತು. ಆ ಕಣ್ಣು ವಿಶಾಲವಾಗಿ ತೆರೆದಿತ್ತು... ದೊಡ್ಡದಾಗಿ, ಅಗಲವಾಗಿ... ಅವು ನನ್ನನ್ನು ನೋಡಿದ ತಕ್ಷಣ ನನ್ನಲ್ಲಿದ್ದ ಕೋಪ ಭಗ್ಗನೆ ಉಕ್ಕಿ ಹರಿಯಿತು. ನನಗೆ ಆ ಮುದುಕನ ಮುಖ ಕಾಣಲೇ ಇಲ್ಲ. ಕೇವಲ ಆ ಕಣ್ಣುಗಳು, ಆ ಕ್ರೂರವಾದ ನೀಲಿ ಕಣ್ಣುಗಳು, ನನ್ನ ದೇಹದಲ್ಲಿನ ರಕ್ತ ಮಂಜುಗಡ್ಡೆಯಂತೆ ಶೀತಲವಾಯಿತು.

ನನ್ನ ಶ್ರವಣೇಂದ್ರಿಯ ವಿಪರೀತ ಸೂಕ್ಷ್ಮ ಆಗಿದೆ ಅಂತ ನಾನು ನಿಮಗೆ ಹೇಳಿದೆ ಅಲ್ಲವೇ? ಮೆಲ್ಲಗಿನ ಸೂಕ್ಷ್ಮ ಶಬ್ದ ಗೋಡೆಯ ಆಚೆ ಬದಿಯ ಗಡಿಯಾರದಿಂದ ಬಂದಂತೆ ಕೇಳಿಸುತ್ತಿದೆ... ಹಾ... ಅದು ಮುದುಕನ ಹೃದಯದ ಬಡಿತ. ನಾನು ನಿಶ್ಶಬ್ದವಾಗಿ ನಿಲ್ಲಲು ಪ್ರಯತ್ನಿಸಿದೆ. ಆದರೆ ಆ ಶಬ್ದ ಜೋರಾಗುತ್ತಾ ಹೋಯಿತು. ಮುದುಕ ತುಂಬಾ ಹೆದರಿರಬೇಕು. ಆ ಶಬ್ದ ಹೆಚ್ಚಾಗುತ್ತಿದ್ದಂತೆ ನನ್ನಲ್ಲಿನ ಸಿಟ್ಟು, ಅದರೊಂದಿಗೆ ನೋವು ಹೆಚ್ಚಾಗುತ್ತಾ ಹೋಯಿತು. ಆ ನಿಶ್ಶಬ್ದ ರಾತ್ರಿಯಲ್ಲಿ ಮೌನ ತುಂಬಿದ ಕಗ್ಗತ್ತಲಿನ ಕೋಣೆಯಲ್ಲಿ ನನ್ನ ಸಿಟ್ಟು ಹೆದರಿಕೆಯಾಗಿ ಬದಲಾಗತೊಡಗಿತು. ಈಗ ನನ್ನ ಹೃದಯದ ಬಡಿತ ಎಷ್ಟು ಜೋರಾಗಿತ್ತೆಂದರೆ, ಖಂಡಿತ ಯಾರಿಗಾದರೂ ಕೇಳಿಸಿರಲೇಬೇಕು. ಹಾ! ಸಮಯ ಬಂದೇ ಬಿಟ್ಟಿತು! ನಾನು ಕೂಡಲೇ 'ಸಾಯಿ! ಸಾಯಿ!' ಎಂದು ಕೂಗುತ್ತಾ ಕೋಣೆಯೊಳಗೆ ಧಾವಿಸಿದೆ. ರಭಸದಿಂದ ಅವನ ಮೇಲೆ ಬಿದ್ದು, ಉಸಿರುಗಟ್ಟಿಸಲು ಹೊದಿಕೆಗಳನ್ನು ಅವನ ಮುಖ ಮುಚ್ಚುವಂತೆ ತಲೆಯ ಮೇಲೆ



> ಆ ಶಬ್ದವು ಕಿವಿಯಲ್ಲಿ ಉಂಟಾದುದಲ್ಲ, ತಲೆಯ ಒಳಗಾಗುತ್ತಿದೆ ಎಂದು ಅರಿವಾಯಿತು. ಮೆಲ್ಲನೆಯ, ಮೃದುವಾದ ಶಬ್ದ, ಗೋಡೆ ಆಚೆಬದಿಯ ಗಡಿಯಾರದಿಂದ ಉಂಟಾಗುವ ಶಬ್ದದಂತೆ, ನನಗೆ ಪರಿಚಿತವಾದದ್ದು. ಈಗ ಆ ಶಬ್ದ ಜೋರಾಯಿತು... ಜೋರಾಗುತ್ತಲೇ ಹೋಯಿತು.

ಎಳೆಯುತ್ತಿರುವಂತೆಯೇ ಮುದುಕ ಜೋರಾಗಿ ಕೂಗಿದ. ಅವನ ಹೃದಯವು ಇನ್ನೂ ಬಡಿಯುತ್ತಲೇ ಇತ್ತು! ಛಲ ಬಿಡದ ತ್ರಿವಿಕ್ರಮನಂತೆ ನಾನು ಯಶಸ್ಸಿನತ್ತ ಸಾಗುತ್ತಿದ್ದೇನೆ ಎಂದು ಸಂತಸದ ನಗೆ ಬೀರಿದೆ. ಎಷ್ಟೋ ನಿಮಿಷಗಳ ಕಾಲ ಆ ಹೃದಯ ಬಡಿಯುತ್ತಲೇ ಇತ್ತು. ಕಡೆಗೂ, ಕಡೆಗೂ ಆ ಶಬ್ದ ನಿಂತಿತು. ಮುದುಕ ಸತ್ತಿದ್ದ. ನಾನು ಹೊದಿಕೆಗಳನ್ನು ಸರಿಸಿ ಅವನ ಹೃದಯದ ಬಡಿತ ಕೇಳಲು, ಅವನ ಎದೆಯ ಮೇಲೆ ಕಿವಿಯಿಟ್ಟೆ. ಉಹ್ಞೂಂ... ಶಬ್ದವಿಲ್ಲ. ಹೃದಯದ ಬಡಿತವಿಲ್ಲ! ಹೌದು, ಅವನು ಸತ್ತಿದ್ದ! ಕಲ್ಲಿನಂತೆ ನಿಶ್ಚಲನಾಗಿದ್ದ. ಅಬ್ಬಾ, ಇನ್ನು ಅವನ ಕಣ್ಣುಗಳು ನನ್ನನ್ನು ಬಾಧಿಸಲಾರವು.

ನನಗೆ ಹುಚ್ಚು ಹಿಡಿದಿದೆ ಅಂತ ಹೇಳ್ತೀರಲ್ಲ? ನಾನು ಎಷ್ಟು ಜಾಗರೂಕತೆಯಿಂದ, ಯಾರಿಗೂ ತಿಳಿಯದಂತೆ ಕಾಣದ ಸ್ಥಳದಲ್ಲಿ ದೇಹವನ್ನು ಅಡಗಿಸಿಟ್ಟಿದನ್ನು ನೀವು ನೋಡಬೇಕಿತ್ತು. ಮೊದಲು ತಲೆಯನ್ನು ಕತ್ತರಿಸಿದ ನಂತರ ಕೈ ಮತ್ತು ಕಾಲುಗಳನ್ನೂ ತರಿದು ಹಾಕಿದೆ. ಒಂದು ಹನಿ ರಕ್ತವೂ ನೆಲದ ಮೇಲೆ ಬೀಳದಂತೆ ಜಾಗ್ರತೆಯಿಂದ ನೋಡಿಕೊಂಡೆ. ನೆಲಕ್ಕೆ ಹಾಕಿದ್ದ ಮೂರು ಮರದ ಹಲಗೆಗಳನ್ನು ಸರಿಸಿ, ದೇಹದ ಭಾಗಗಳನ್ನೂ ಕೆಳಗೆ ಹಾಕಿದೆ. ಮತ್ತೆ ಹಲಗೆಗಳನ್ನೂ ಅಚ್ಚುಕಟ್ಟಾಗಿ ಮೊದಲಿನಂತೆಯೇ ಜೋಡಿಸಿದೆ. ಯಾರಿಗೂ ಹಲಗೆ ಸರಿಸಿರುವುದು ಗೋಚರಿಸಲು ಸಾಧ್ಯವೇ ಇರಲಿಲ್ಲ.

ಈ ಕೆಲಸ ಮುಗಿಸುತ್ತಿದ್ದಂತೆಯೇ ಯಾರೋ ಬಾಗಿಲ ಬಳಿ ಬಂದಂತಾಯಿತು. ಈಗ ಬೆಳಗಿನ ಜಾವ ನಾಲ್ಕು ಗಂಟೆ, ಇನ್ನೂ ಕತ್ತಲು. ಯಾರಿರಬಹುದು? ಆದರೆ, ನನಗೆ ಯಾವ ರೀತಿಯ ಭಯವೂ ಕಾಡಲಿಲ್ಲ, ಕೆಳಗಡೆ ಹೋಗಿ ಬಾಗಿಲು ತೆರೆದೆ. ಮೂರು ಜನರು ಬಾಗಿಲಾಚೆ ನಿಂತಿದ್ದರು, ಮೂವರು ಪೊಲೀಸ್ ಅಧಿಕಾರಿಗಳು! ನೆರೆಮನೆಯವರು ಮುದುಕ ಹೆದರಿಕೆಯಿಂದ ಕೂಗಿದ್ದನ್ನು ಕೇಳಿ ಪೊಲೀಸರಿಗೆ ಫೋನ್ ಮಾಡಿದ್ದರಂತೆ. ಹಾಗಾಗಿ ಇವರು ವಿಚಾರಣೆ ನಡೆಸಲು ಬಂದಿದ್ದರು. ನಾನು ಅವರನ್ನು ಒಳಗೆ ಕರೆದೆ. ವಿಚಲಿತನಾಗದೆ, ಕೆಟ್ಟ ಕನಸು ಕಂಡಿದ್ದರಿಂದ ಹೆದರಿಕೆಯಿಂದ ನಾನೇ ಕೂಗಿದ್ದು ಎಂದು ಹೇಳಿದೆ. ಮುದುಕನು ತನ್ನ ಸ್ನೇಹಿತರನ್ನು ನೋಡಲು ಊರಾಚೆ ಹೋಗಿದ್ದಾನೆ ಎಂದು ತಿಳಿಸಿದೆ. ಪೊಲೀಸರು ಮನೆಯ ಒಳಗೆಲ್ಲಾ ನೋಡಬೇಕೆಂದಾಗ ಅವರ ಸಂಗಡವೇ ಹೋದೆ. ಕಡೆಗೆ ಮುದುಕನು ಮಲಗುವ ಕೋಣೆಗೆ ಕರೆತಂದೆ. ಆಟದ ಒಂದು ಭಾಗದಂತೆ, ಅವರನ್ನು ಅಲ್ಲೇ ಮಾತನಾಡುತ್ತಾ ಕೂರಿಸಿಕೊಂಡೆ.

ನನ್ನ ಸಲೀಸಿನ, ಸರಾಗ ನಡವಳಿಕೆಯನ್ನು ನೋಡಿದ ಪೊಲೀಸರು ನಾನು ಹೇಳಿದ ಕತೆಯನ್ನು ನಂಬಿದರು. ಸ್ನೇಹದಿಂದಲೇ ಸಂಭಾಷಣೆಯಲ್ಲಿ ತೊಡಗಿದರು. ಆದರೆ, ಮಾತು ಸಾಗಿದಂತೆ, ಅವರು ಎದ್ದು ಹೋದರೆ ಸಾಕೆಂದು ಬಯಸಿದೆ. ತಲೆನೋವು ಬಾಧಿಸತೊಡಗಿತು. ಕಿವಿಯಲ್ಲಿ ವಿಚಿತ್ರ ಶಬ್ದಗಳು ಉಂಟಾದವು. ಅಶಾಂತಿಯಿಂದ ವೇಗವಾಗಿ, ವಿಪರೀತ ಮಾತನಾಡತೊಡಗಿದೆ. ಶಬ್ದ ಸ್ಪಷ್ಟ ರೂಪ ಪಡೆದುಕೊಂಡಿತು. ಅಂದರೂ ಅವರು ಕುಳಿತೇ ಇದ್ದರು, ಮಾತನಾಡುತ್ತಲೇ ಇದ್ದರು.

ಇದ್ದಕ್ಕಿದ್ದಂತೆ ಆ ಶಬ್ದವು ಕಿವಿಯಲ್ಲಿ ಉಂಟಾದುದಲ್ಲ, ತಲೆಯ ಒಳಗಾಗುತ್ತಿದೆ ಎಂದು ಅರಿವಾಯಿತು. ಪೇಲವಗೊಂಡೆ, ಮುಖದ ಬಣ್ಣ ಬದಲಾದಂತೆ ಅನಿಸಿತು. ಮತ್ತೂ ಜೋರಾಗಿ, ವೇಗವಾಗಿ ಮಾತನಾಡುತ್ತಾ ಹೋದೆ. ಶಬ್ದವೂ ಹೆಚ್ಚಾಗುತ್ತಾ ಹೋಯಿತು. ಮೆಲ್ಲನೆಯ, ಮೃದುವಾದ ಶಬ್ದ, ಗೋಡೆ ಆಚೆಬದಿಯ ಗಡಿಯಾರದಿಂದ ಉಂಟಾಗುವ ಶಬ್ದದಂತೆ, ನನಗೆ ಪರಿಚಿತವಾದದ್ದು. ಈಗ ಆ ಶಬ್ದವೂ ಜೋರಾಯಿತು... ಜೋರಾಗುತ್ತಲೇ ಹೋಯಿತು. ಯಾಕೆ ಈ ಪೊಲೀಸರು ಎದ್ದು ಹೋಗುತ್ತಿಲ್ಲ? ಜೋರಾಯಿತು, ಜೋರಾಯಿತು. ನಾನು ಎದ್ದು ಕೋಣೆಯ ಒಳಗಡೆಯೇ ಶತಪಥ ತಿರುಗಾಡಲು ಶುರುಮಾಡಿದೆ. ಕುರ್ಚಿಯನ್ನು ಜೋರಾಗಿ ಶಬ್ದ ಬರುವಂತೆ ತಳ್ಳಿ, ನನಗೆ ಕೇಳಿಬರುತ್ತಿರುವ ಕರ್ಕಶ ಶಬ್ದವನ್ನು ಮರೆಮಾಚಲು ಪ್ರಯತ್ನಿಸಿದೆ. ಇನ್ನೂ ಎತ್ತರದ ಧ್ವನಿಯಲ್ಲಿ ಮಾತನಾಡಲು ತೊಡಗಿದೆ. ಆದರೂ... ಅವರು ಕುಳಿತೇ ಇದ್ದರು, ಮಾತನಾಡುತ್ತಿದ್ದರು, ಮುಗುಳ್ನಗೆ ಬೀರುತ್ತಿದ್ದರು. ಅವರಿಗೆ ಆ ಶಬ್ದ ಕೇಳಿಸುತ್ತಿಲ್ಲವೇ?

ಇಲ್ಲ! ಅವರಿಗೆ ಕೇಳಿಸುತ್ತಿದೆ! ನನಗೆ ಖಚಿತವಾಗಿ ಗೊತ್ತು. ಅವರಿಗೆ ಅರಿವಾಗಿದೆ! ಈಗ ಅವರು ನನ್ನ ಜೊತೆ ಆಟವಾಡುತ್ತಿದ್ದಾರೆ. ಅವರ ನಗುಮುಖದ ಮಾತುಗಳು, ಆ ವಿಕಾರ ಶಬ್ದ... ಇವುಗಳಿಂದ ನನ್ನ ನೋವು ಭರಿಸುವ ಶಕ್ತಿಯನ್ನೂ ಮೀರಿದ ಯಾತನೆಯನ್ನು ಸಹಿಸುತ್ತಿದ್ದೇನೆ. ಜೋರಾಯಿತು! ಇನ್ನೂ ಜೋರಾಯಿತು! ವಿಪರೀತ ಜೋರಾಯಿತು! ಇಲ್ಲ, ಇಲ್ಲ, ಇನ್ನೂ ತಡೆಯಲು ಸಾಧ್ಯವಿಲ್ಲ. ಅವರಿಗೆ ಹಲಗೆಗಳತ್ತ ಬೊಟ್ಟು ಮಾಡಿ ಜೋರಾಗಿ ಕೂಗಿ ಹೇಳಿದೆ, 'ಹೌದು! ಹೌದು! ನಾನು ಅವನನ್ನು ಕೊಂದೆ. ಹಲಗೆಗಳನ್ನು ಸರಿಸಿ ನೋಡಿ! ನಾನು ಕೊಂದೆ. ಅವನನ್ನು ಉಸಿರುಗಟ್ಟಿಸಿ ಕೊಂದೆ. ಆದರೆ... ಆದರೆ... ಅವನ ಹೃದಯದ ಬಡಿತ ಏಕೆ ನಿಲ್ಲುತ್ತಿಲ್ಲ? ಏಕೆ ನಿಲ್ಲುತ್ತಿಲ್ಲ!

ಪ್ರತಿಕ್ರಿಯಿಸಿ: **feedback@sudha.co.in**